ಶ್ರೀ ಜಗದೀಶ್ ಶೆಟ್ಟರ್:– ಇಲ್ಲಿ ಗೋವಿನ ರಕ್ಷಣೆ ಅಲ್ಲ, ಗೋವಿನ ಹತ್ಯೆ ನಡೆಯುತ್ತಿದೆ.

(ಸದನದ ಬಾವಿಯಲ್ಲಿದ್ದ ಸದಸ್ಯರು 'ಗೋಹತ್ಯೆಯನ್ನು ಪ್ರೋತ್ಸಾಹಿಸುತ್ತಿರುವ ಸರ್ಕಾರಕ್ಕೆ ಧಿಕ್ಕಾರ' ಎಂದು ಕೂಗುತ್ತಿದ್ದರು)

ವಿಧೇಯಕವನ್ನು ಹಿಂದಕ್ಕೆ ಪಡೆಯುವುದು

2. ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕ, 2012

ಅಧ್ಯಕ್ಷರು:– 2012ನೇ ಸಾಲಿನ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ಅನುಮತಿ ನೀಡಬೇಕೆಂದು ಕೋರುವುದು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ,

2012ನೇ ಸಾಲಿನ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿ ಕೋರುತ್ತೇನೆ.

(ಸದನದ ಬಾವಿಯಲ್ಲಿದ್ದ ಬಿ.ಜೆ.ಪಿ.ಸದಸ್ಯರು 'ಭ್ರಷ್ಟರಿಗಿದೆ ಮನ್ನಣೆ, ಗೋವಿಗಿಲ್ಲ ರಕ್ಷಣೆ' ಎಂಬ ಭಿತ್ತಿಪತ್ರವನ್ನು ಪ್ರದರ್ಶಿಸುತ್ತಾ ಕೂಗುತ್ತಿದ್ದರು)

ಶ್ರೀ ಜಗದೀಶ್ ಶೆಟ್ಟರ್:– ಇವರೆಲ್ಲಾ ಗೋಭಕ್ಷಕರು

ಅಧ್ಯಕ್ಷರು:– ಪ್ರಸ್ತಾವನೆ ಹೀಗಿದೆ,

2012ನೇ ಸಾಲಿನ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯಲು ಅನುಮತಿ ನೀಡುವುದು.